# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| 1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 29 |
| 2. ಸದಸ್ಯರ ಹೆಸರು | : | ಶ್ರೀ ಸಿ.ಎನ್ ಮಂಜೇಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| 3. ಉತ್ತರಿಸಬೇಕಾದ ದಿನಾಂಕ | : | 27.01.2026 |
| 4. ಉತ್ತರಿಸುವ ಸಚಿವರು | : | ಮಾನ್ಯ ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು |

***

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ | ಎಪಿಎಂಸಿ ಕಾಯ್ದೆಗೆ ತಿದ್ದುಪಡಿ ತಂದ ನಂತರ ಮಾರುಕಟ್ಟೆ ಪ್ರಾಂಗಣಗಳ ಆದಾಯದಲ್ಲಿ ಎಷ್ಟು ಕುಸಿತವಾಗಿದೆ; ಇದನ್ನು ಸರಿಪಡಿಸಲು ಸರ್ಕಾರದ ಯೋಜನೆಯೇನು; | ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ ಮತ್ತು ಅಭಿವೃದ್ಧಿ) ಅಧಿನಿಯಮ, 1966ಕ್ಕೆ 2020ನೇ ಸಾಲಿನಲ್ಲಿ ಅಧಿಸೂಚಿತ ಕೃಷಿ ಉತ್ಪನ್ನಗಳ ವ್ಯವಹಾರದ ಮೇಲಿನ ಮಾರುಕಟ್ಟೆ ಸಮಿತಿಗಳ ನಿಯಂತ್ರಣ ಅಧಿಕಾರವನ್ನು ಮಾರುಕಟ್ಟೆ ಪ್ರಾಂಗಣಗಳಿಗೆ ಮಾತ್ರ ಸೀಮಿತಗೊಳಿಸಿ ತಿದ್ದುಪಡಿ ಮಾಡಿದ್ದರಿಂದ ಸದರಿ ತಿದ್ದುಪಡಿ ಪೂರ್ವದಲ್ಲಿ ರಾಜ್ಯದಲ್ಲಿನ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಿಗೆ ಮಾರುಕಟ್ಟೆ ಶುಲ್ಕ/ಬಳಕೆದಾರರ ಶುಲ್ಕದ ರೂಪದಲ್ಲಿ ಆಕರಣೆಯಾಗುತ್ತಿದ್ದ ಆದಾಯವು **ರೂ.618.00 ಕೋಟಿ** ಗಳಿಂದ **ರೂ.194.45** ಕೋಟಿಗಳಿಗೆ ಗಣನೀಯವಾಗಿ ಇಳಿಕೆಯಾಗಿರುತ್ತದೆ.<br><br>ಮುಂದುವರೆದು, ಅಧಿಸೂಚಿತ ಕೃಷಿ ಉತ್ಪನ್ನಗಳ ಖರೀದಿ-ಮಾರಾಟ ವ್ಯವಹಾರದ ಮೇಲಿನ ಮಾರುಕಟ್ಟೆ ಸಮಿತಿಗಳ ನಿಯಂತ್ರಣ ವ್ಯಾಪ್ತಿಯನ್ನು 2020ರ ತಿದ್ದುಪಡಿ ಪೂರ್ವದಲ್ಲಿದ್ದಂತೆ ಮಾರುಕಟ್ಟೆ ಪ್ರದೇಶದ ವ್ಯಾಪ್ತಿಗೆ ಪುನರ್ ನಿಗದಿಪಡಿಸಿ ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ ಮತ್ತು ಅಭಿವೃದ್ಧಿ) ಅಧಿನಿಯಮ, 1966ಕ್ಕೆ 2024ನೇ ಸಾಲಿನಲ್ಲಿ ತಿದ್ದುಪಡಿ ಜಾರಿಗೆ ತಂದಿರುವುದರಿಂದ ಮಾರುಕಟ್ಟೆ ಸಮಿತಿಗಳ ಮಾರುಕಟ್ಟೆ ಶುಲ್ಕ/ಬಳಕೆದಾರರ ಶುಲ್ಕದ ಆದಾಯವು 2024-25ರಲ್ಲಿ **ರೂ.498.40 ಕೋಟಿಗಳಿಗೆ** ಹೆಚ್ಚಳವಾಗಿದ್ದು, 2025-26ನೇ ಡಿಸೆಂಬರ್ ಅಂತ್ಯಕ್ಕೆ **ರೂ.413.14 ಕೋಟಿ** ಗಳ ಆದಾಯ ಆಕರಣೆಯಾಗಿರುತ್ತದೆ. |

| | | |
|---|---|---|
| ಆ | ರಾಜ್ಯದ ಎಷ್ಟು ಎಪಿಎಂಸಿಗಳಲ್ಲಿ ವೈಜ್ಞಾನಿಕ ಶೈತ್ಯಾಗಾರ (Cold storage) ವ್ಯವಸ್ಥೆ ಇದೆ. ಈ ವರ್ಷ ಹೊಸದಾಗಿ ಎಷ್ಟು ಶೈತ್ಯಾಗಾರಗಳನ್ನು ನಿರ್ಮಿಸಲು ಅನುದಾನ ಮೀಸಲಿಡಲಾಗಿದೆ. | ರಾಜ್ಯದ ಯಶವಂತಪುರ-ಬೆಂಗಳೂರು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ದಾಸನಪುರ ಉಪ ಮಾರುಕಟ್ಟೆ ಪ್ರಾಂಗಣದಲ್ಲಿ ಹಾಗೂ ಹಣ್ಣು.ಹೂವು ಮತ್ತು ತರಕಾರಿ (ವಿಶೇಷ) ಬಿನ್ನಿಪೇಟೆ-ಬೆಂಗಳೂರು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಲ್ಲಿ ತಲಾ 01 ರಂತೆ. ಈಗಾಗಲೇ ಎರಡು(02) ಶೈತ್ಯಾಗಾರಗಳನ್ನು ಸ್ಥಾಪಿಸಲಾಗಿರುತ್ತದೆ<br><br>ಇದರೊಂದಿಗೆ, RIDF-29, RIDF-30 ಮತ್ತು RIDF-31ರಡಿ ಹೊಸದಾಗಿ ಶೈತ್ಯಾಗಾರಗಳನ್ನು ನಿರ್ಮಿಸಲು ಕ್ರಮವಹಿಸಲಾಗಿದ್ದು. ಸದರಿ ವಿವರವನ್ನು **ಅನುಬಂಧದಲ್ಲಿ** ಒದಗಿಸಿದೆ. |
| ಇ | ಕೃಷಿ ಮಾರುಕಟ್ಟೆಯಲ್ಲಿ ಬೆಲೆ ಕುಸಿತವಾದಾಗ ರೈತರಿಗೆ ನೆರವಾಗಲು ಸ್ಥಾಪಿಸಲಾದ ಬೆಲೆ ಸ್ಥಿರೀಕರಣ ನಿಧಿಯಲ್ಲಿ (Price Stabilization Fund) ಪ್ರಸ್ತುತ ಲಭ್ಯವಿರುವ ಮೊತ್ತ ಎಷ್ಟು? | ಕೃಷಿ ಮಾರುಕಟ್ಟೆಯಲ್ಲಿ ಬೆಲೆ ಕುಸಿತವಾದಾಗ ರೈತರಿಗೆ ನೆರವಾಗಲು ಬೆಲೆ ಸ್ಥಿರೀಕರಣ ನಿಧಿ (Price Stabilization Fund) ಶೀರ್ಷಿಕೆಯಡಿಯಲ್ಲಿ ಯಾವುದೇ ನಿಧಿಯನ್ನು ಸ್ಥಾಪಿಸಲಾಗಿರುವುದಿಲ್ಲ.<br><br>ಆದರೆ ಕೃಷಿ ಉತ್ಪನ್ನ ಮಾರುಕಟ್ಟೆಗಳಲ್ಲಿ ಬೆಲೆಗಳು ಕುಸಿತಗೊಂಡ ಸಂದರ್ಭಗಳಲ್ಲಿ ರೈತರು ತಮ್ಮ ಉತ್ಪನ್ನಗಳನ್ನು ಒತ್ತಡಾತ್ಮಕವಾಗಿ ಮಾರಾಟ ಮಾಡುವುದನ್ನು ತಪ್ಪಿಸಲು ಈ ಕೆಳಕಂಡ ಯೋಜನೆಗಳನ್ನು ರೂಪಿಸ ಲಾಗಿರುತ್ತದೆ:-<br><br>1) ಕೇಂದ್ರ ಸರ್ಕಾರದ ಹಾಗೂ ರಾಜ್ಯ ಸರ್ಕಾರದ ಯೋಜನೆಗಳಾದ ಬೆಂಬಲ ಬೆಲೆ ಯೋಜನೆ. ಮಾರುಕಟ್ಟೆ ಮಧ್ಯಪ್ರವೇಶ ಯೋಜನೆ. ಫ್ಲೋರ್‌ಪ್ರೈಸ್ ಯೋಜನೆ. ಬೆಲೆ ವ್ಯತ್ಯಾಸ ಪಾವತಿ ಯೋಜನೆಗಳ ಅನುಷ್ಠಾನ<br><br>2) ಸದರಿ ಯೋಜನೆಗಳ ಅನುಷ್ಠಾನಕ್ಕಾಗಿ ಆವರ್ತನಿಧಿಯನ್ನು ಸ್ಥಾಪಿಸಲಾಗಿರುತ್ತದೆ. ಕೃಷಿ ಮತ್ತು ತೋಟಗಾರಿಕಾ ಉತ್ಪನ್ನಗಳ ಬೆಲೆ ಸ್ಥಿರೀಕರಣ ಸಚಿವ ಸಂಪುಟ ಉಪ ಸಮಿತಿ ತೀರ್ಮಾನದಂತೆ. ಖರೀದಿ ಪ್ರಕ್ರಿಯೆ ಕೈಗೊಳ್ಳಲಾಗುತ್ತಿದ್ದು. ಆವರ್ತನಿಧಿಯಲ್ಲಿ ಪ್ರಸ್ತುತ **ರೂ.1,255.00 ಕೋಟಿಗಳು** ಲಭ್ಯವಿರುತ್ತದೆ. |

**ಸಂಖ್ಯೆ: ಸಿಒ 18 ಎಂಆರ್‌ಇ 2026**

(ಶಿವಾನಂದ ಎಸ್. ಪಾಟೀಲ)
ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ
ಮಾರುಕಟ್ಟೆ ಸಚಿವರು

# ಅನುಬಂಧ

ರಾಜ್ಯದ ಆಯ್ದ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಲ್ಲಿ RIDF-29, 30 & 31 ರಡಿ ಶೈತ್ಯಾಗಾರ ಸ್ಥಾಪನೆಗೆ ಕೈಗೊಂಡ ಕ್ರಮದ ವಿವರ

| ಕ್ರ.ಸಂ. | ಟ್ರಾಂಚ್ | ಜಿಲ್ಲೆಯ ಹೆಸರು | ಕೃಷಿ ಉತ್ಪನ್ನ ಮಾರುಕಟ್ಟೆಯ ಹೆಸರು | ಶೈತ್ಯಾಗಾರಗಳ ಸಂಖ್ಯೆ | ಯೋಜನಾ ವೆಚ್ಚ (ರೂ. ಲಕ್ಷಗಳಲ್ಲಿ) | ಕಾಮಗಾರಿಯ ಹಂತ |
|---|---|---|---|---|---|---|
| 1 | RIDF 29 | ಹಾವೇರಿ | ಬ್ಯಾಡಗಿ | 1 | 1000.00 | ಕಾಮಗಾರಿ ಪ್ರಗತಿಯಲ್ಲಿದೆ |
| 2 | | ವಿಜಯಪುರ | ವಿಜಯಪುರ - ಬಸವನಬಾಗೇವಾಡಿ | 2 | 750.00 | ಕಾಮಗಾರಿ ಪ್ರಗತಿಯಲ್ಲಿದೆ |
| 3 | | ಕೊಪ್ಪಳ | ಯಲಬುರ್ಗಾ | 1 | 700.00 | ಕಾಮಗಾರಿ ಪ್ರಗತಿಯಲ್ಲಿದೆ |
| 4 | RIDF 30 | ಬೆಳಗಾವಿ | ಬೆಳಗಾವಿ | 1 | 950.00 | ಕಾಮಗಾರಿ ಪ್ರಗತಿಯಲ್ಲಿದೆ |
| 5 | | ಗದಗ | ಗದಗ | 1 | 1480.00 | ಕಾಮಗಾರಿ ಪ್ರಗತಿಯಲ್ಲಿದೆ |
| 6 | | ಮೈಸೂರು | ಮೈಸೂರು | 1 | 1500.00 | ಕಾಮಗಾರಿ ಪ್ರಗತಿಯಲ್ಲಿದೆ |
| 7 | | ಹಾವೇರಿ | ರಾಣೆಬೆನ್ನೂರು | 3 | 3000.00 | ಕಾಮಗಾರಿ ಪ್ರಗತಿಯಲ್ಲಿದೆ |
| 8 | | ತುಮಕೂರು | ತುಮಕೂರು | 1 | 800 00 | ಕಾಮಗಾರಿ ಪ್ರಗತಿಯಲ್ಲಿದೆ |
| 9 | | | ಸಿರಾ - ಮಾನಂಗಿ | 1 | 1030.00 | ಕಾಮಗಾರಿ ಪ್ರಗತಿಯಲ್ಲಿದೆ |
| 10 | | ಚಾಮರಾಜನಗರ | ಗುಂಡ್ಲುಪೇಟೆ | 1 | 890.00 | ಕಾಮಗಾರಿ ಪ್ರಗತಿಯಲ್ಲಿದೆ |
| 11 | | ಬಳ್ಳಾರಿ | ಬಳ್ಳಾರಿ | 1 | 1175.00 | ಕಾಮಗಾರಿ ಪ್ರಗತಿಯಲ್ಲಿದೆ |
| 12 | | ಕೊಪ್ಪಳ | ಯಲಬುರ್ಗಾ - ಚಿಕ್ಕೊಪ್ಪ | 1 | 1150.00 | ಕಾಮಗಾರಿ ಪ್ರಗತಿಯಲ್ಲಿದೆ |
| 13 | RIDF 31 | ಚಿತ್ರದುರ್ಗ | ಹೊಸದುರ್ಗ | 1 | 650.00 | ನಬಾರ್ಡ್‌ನಿಂದ ಅನುಮೋದನೆ ದೊರೆತಿದ್ದು, ಆಡಳಿತಾತ್ಮಕ ಅನುಮೋದನೆಗೆ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ. |
| 14 | | ಗದಗ | ಹೊಳೇಆಲೂರು | 1 | 700.00 | |
| 15 | | ವಿಜಯಪುರ | ಸಿಂಧಗಿ | 1 | 665.00 | |
| 16 | | ಧಾರವಾಡ | ಕುಂದಗೋಳ | 1 | 665.00 | |
| 17 | | ಹಾಸನ | ಅರಸೀಕೆರೆ | 1 | 820.00 | |
| | | | ಒಟ್ಟು | **20** | **17925.00** | |

ಅಧೀಕ್ಷಕ ಅಭಿಯಂತರರು